**OS.No.**167/2022
**ಪಿ ಡಬ್ಲ್ಯೂ:1**

**ದಿಃ 16-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಶ್ರೀ ಎಂ ಟಿ ಎಸ್ 1 ರಿಂದ 6 ಪ್ರತಿವಾದಿಗಳ ಪರ ವಕೀಲರಿಂದ**

ನನ್ನ ತಂದೆ ಯಾವ ವರ್ಷದಲ್ಲಿ ಸರ್ವೆ ನಂ 145 ರ ಆಸ್ತಿಯನ್ನು ನನಗೆ ಮತ್ತು ನನ್ನ ಸಹೋದರರಿಗೆ ವಿಭಾಗಿಸಿ ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಕಳೆದ 20 ವರ್ಷಗಳಿಂದ ಸರ್ವೆ ನಂ 145 ರಲ್ಲಿ ತಲಾ 25 ಗುಂಟೆ ಆಸ್ತಿಯನ್ನು ಸಾಗುವಳಿ ಮಾಡುತ್ತಿದ್ದೇನೆ. ನನ್ನ ತಂದೆ ಮರಣ ಹೊಂದಿ ಈಗ್ಗೆ 50 ವರ್ಷವಾಗಿದೆ. ನನ್ನ ತಂದೆ ಜೀವಂತ ಇದ್ದಾಗೆ ಸರ್ವೆ ನಂ 145 ರ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳಲ್ಲಿ ಭಾಗ ನೀಡಬೇಕು ಎಂದು ನಿಂಗಪ್ಪರವರನ್ನು ಯಾವತ್ತು ಕೇಳಿಲ್ಲ. 1969 ಕ್ಕೂ ಮುಂಚೆಯೇ ನನ್ನ ತಂದೆ ಗಂಗಾಧರಪ್ಪ ಮತ್ತು ಅವರ ಸಹೋದರ ನಿಂಗಪ್ಪರವರು ಮೌಖಿಕವಾಗಿ ಕುಟುಂಬದ ಆಸ್ತಿಗಳನ್ನು ವಿಭಾಗಿಸಿಕೊಂಡಿದ್ದ ಕಾರಣ ನನ್ನ ತಂದೆ ನಿಂಗಪ್ಪರವರು ತಮ್ಮ ಜೀವಿತಾವಧಿಯಲ್ಲಿ ಭಾಗ ಕೇಳಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. 1969 ಕ್ಕೂ ಮುಂಚೆ ಮಾಡಿಕೊಂಡ ಮೌಖಿಕ ವಿಭಾಗದಲ್ಲಿ ಬಿಲ್ಲಹಳ್ಳಿ ಗ್ರಾಮದ ಸರ್ವೆ ನಂ 9 ರಲ್ಲಿ 3 ಎಕರೆ 04 ಗುಂಟೆ ಜಮೀನು ಮತ್ತು ದುರ್ವಿಗೆರೆ ಗ್ರಾಮದ ಸರ್ವೆ ನಂ 145/2 ಆಸ್ತಿಯಲ್ಲಿ 1 ಎಕರೆ 37 ಗುಂಟೆ ಜಮೀನು ಆಸ್ತಿಯಲ್ಲಿ ನನ್ನ ತಂದೆಯ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ತನ್ನ ಭಾಗಕ್ಕೆ ಬಂದ ಸರ್ವೆ ನಂ 9 ರಲ್ಲಿಯ ಆಸ್ತಿಗಳನ್ನು 2 ಕ್ರಯಪತ್ರಗಳನ್ನು ಬರೆದುಕೊಡುವುದರ ಮೂಲಕ ಆಸ್ತಿಯನ್ನು ಆಗಲೇ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ತನ್ನ ಭಾಗಕ್ಕೆ ಬಂದ ಸರ್ವೆ ನಂ 9 ರಲ್ಲಿಯ ಆಸ್ತಿಯನ್ನು ಆಗಲೇ ಮಾರಾಟ ಮಾಡಿದ್ದ ಕಾರಣ ನನ್ನ ತಂದೆಯ ಭಾಗಕ್ಕೆ ಬಂದ ಸರ್ವೆ ನಂ 145 ರಲ್ಲಿಯ 1 ಎಕರೆ 37 ಗುಂಟೆ ಆಸ್ತಿ ಮಾತ್ರ ಉಳಿದಿತ್ತು ಎಂದರೆ ಸರಿ.

ಸರ್ವೆ ನಂ 145 ರಲ್ಲಿಯ 1 ಎಕರೆ 37 ಗುಂಟೆ ಆಸ್ತಿಯ ಪೈಕಿ ನನ್ನ ಸಹೋದರರಾದ ಕುಬೇರಪ್ಪರವರ 25 ಗುಂಟೆ ಹಿಸ್ಸೆಯ ಭಾಗವನ್ನು ವಾದಿ ನಂ 4 ಮತ್ತು 5 ರವರಿಗೆ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿ. ನನ್ನ ಇನ್ನೊಬ್ಬ ಸಹೋದರ ಉಮೇಶಪ್ಪ ಅಂದರೆ 3 ನೇ ವಾದಿಯ ಗಂಡ ಸರ್ವೆ ನಂ 145 ರಲ್ಲಿ

ತನ್ನ ಭಾಗದ ಆಸ್ತಿಯನ್ನು ಪ್ರತಿವಾದಿ ನಂ 7 ರವರಿಗೆ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿ. ಪ್ರಸ್ತುತ ಸರ್ವೆ ನಂ 145 ರಲ್ಲಿ 1 ಎಕರೆ 37 ಗುಂಟೆ ಜಮೀನು ಆಸ್ತಿಯನ್ನು ನಾನು, 3 ಮತ್ತು 4 ನೇ ವಾದಿ ಮತ್ತು 7 ನೇ ಪ್ರತಿವಾದಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದೇವೆ ಎಂದರೆ ಸರಿ. ಹಾಗೆ ಸಾಗುವಳಿ ಮಾಡಿಕೊಂಡು ಬರುತ್ತಿರುವ ಆಸ್ತಿಗಳು ಎಂದರೆ ದಾವಾ ಕ್ರಮ ಸಂಖ್ಯೆ 5 ರಿಂದ 7 ರ ಅನುಸೂಚಿ ಆಸ್ತಿಗಳು ಎಂದರೆ ಸರಿ. ಈ ಮುಂಚೆ ನಾವು ದಾವಾ ಕ್ರಮ ಸಂಖ್ಯೆ 5 ರಿಂದ 7 ರ ಅನುಸೂಚಿ ಆಸ್ತಿಗಳನ್ನು ಸಾಗುವಳಿ ಮಾಡಿಕೊಂಡು ಬರುತ್ತಿದ್ದರು ಸಹ ನಮ್ಮ ದೊಡ್ಡಮ್ಮ ಚನ್ನಮ್ಮ ಗಂಡನ ನಿಂಗಪ್ಪ ರವರ ಹೆಸರಿನಲ್ಲಿ ಕಂದಾಯ ದಾಖಲೆಗಳು ಇದ್ದವು ಎಂದರೆ ಸರಿ. ನಾನು ಚನ್ನಮ್ಮ ಗಂಡ ನಿಂಗಪ್ಪರವರಿಗೆ ನಮ್ಮ ಅನುಭವದ ಪ್ರಕಾರ ದಾವಾ ಕ್ರಮ ಸಂಖ್ಯೆ 5 ರಿಂದ 7 ಅನುಸೂಚಿ ಆಸ್ತಿಗಳನ್ನು ಕಂದಾಯ ದಾಖಲೆಗಳನ್ನು ಬದಲಾವಣೆ ಮಾಡಿಕೊಡಲು 2012 ರಲ್ಲಿ ಕೇಳಿಕೊಂಡಿದ್ದು ಆಗ ಚನ್ನಮ್ಮ ಗಂಡ ನಿಂಗಪ್ಪರವರು ಸದರಿ ಆಸ್ತಿಗಳ ಕಂದಾಯ ದಾಖಲೆಗಳನ್ನು ನಮ್ಮ ಹೆಸರಿಗೆ ಬದಲಾವಣೆ ಮಾಡಿಕೊಡುವ ಬದಲು ನಮ್ಮ ಹೆಸರಿಗೆ ಮರಣ ಶಾಸನ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಸದರಿ ಚನ್ನಮ್ಮ ಗಂಡ ನಿಂಗಪ್ಪರವರು ಬರೆದುಕೊಟ್ಟ ಮೂರು ಮರಣ ಶಾಸನ ಪತ್ರಗಳ ಆಧಾರದ ಮೇಲೆ ದಾವಾ ಕ್ರಮ ಸಂಖ್ಯೆ 5 ರಿಂದ 7 ರ ಅನುಸೂಚಿ ಆಸ್ತಿಯ ಕಂದಾಯ ದಾಖಲೆಗಳು ನಮ್ಮ ಹೆಸರಿಗೆ ಹಕ್ಕು ಬದಲಾವಣೆ ಆಗಿವೆ ಎಂದರೆ ಸರಿ.

ಸಾಕ್ಷಿಗೆ 4ನೇ ವಾದಿಯ ಹೆಸರಿಗೆ ಇದ್ದ ನೋಂದಾಯಿತ ಮರಣ ಶಾಸನ ಪತ್ರದ ದೃಢೀಕೃತ ಪ್ರತಿಯನ್ನು ತೋರಿಸಿ ಕೇಳಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಒಪ್ಪಿಕೊಂಡಿದ್ದು ವಿನಂತಿಯ ಮೇರೆಗೆ ನಿಡಿ 1 ಎಂದು ಗುರುತಿಸಲಾಯಿತು.

ಸಾಕ್ಷಿಗೆ 5ನೇ ವಾದಿಯ (ಸಾಕ್ಷಿಯ) ಹೆಸರಿಗೆ ಇದ್ದ ನೋಂದಾಯಿತ ಮರಣ ಶಾಸನ ಪತ್ರದ ದೃಢೀಕೃತ ಪ್ರತಿಯನ್ನು ತೋರಿಸಿ ಕೇಳಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಒಪ್ಪಿಕೊಂಡಿದ್ದು ವಿನಂತಿಯ ಮೇರೆಗೆ ನಿಡಿ 2 ಎಂದು ಗುರುತಿಸಲಾಯಿತು.

**OS.No.**167/2022

**ಪಿ ಡಬ್ಲ್ಯೂ:1**

ಸಾಕ್ಷಿಗೆ 7ನೇ ಪ್ರತಿವಾದಿ ಹೆಸರಿಗೆ ಇದ್ದ ನೋಂದಾಯಿತ ಮರಣ ಶಾಸನ ಪತ್ರದ ಜೆರಾಕ್ಸ್ ಪ್ರತಿಯನ್ನು ತೋರಿಸಿ ಕೇಳಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಒಪ್ಪಿಕೊಂಡಿದ್ದು ವಿನಂತಿಯ ಮೇರೆಗೆ ನಿಡಿ 3 ಎಂದು ಗುರುತಿಸಲಾಯಿತು.

ನಿಡಿ 1 ರಿಂದ 3 ರ ದಾಖಲೆಗಳ ಆಧಾರದ ಮೇಲೆ ದಾವಾ ಕ್ರಮ ಸಂಖ್ಯೆ 5 ರಿಂದ 7 ರ ಅನುಸೂಚಿ ಆಸ್ತಿಗಳ ಕಂದಾಯ ದಾಖಲೆಗಳು ನನ್ನ ಮತ್ತು 4 ನೇ ವಾದಿ ಮತ್ತು 7 ನೇ ಪ್ರತಿವಾದಿಯ ಹೆಸರಿಗೆ ಕ್ರಮವಾಗಿ ಹಕ್ಕು ಬದಲಾವಣೆಯಾಗಿವೆ ಎಂದರೆ ಸರಿ. ನಿಡಿ 1 ರಿಂದ 3 ರ ವಿಷಯ ಮತ್ತು ಅವುಗಳ ಆಧಾರದ ಮೇಲೆ ಕಂದಾಯ ದಾಖಲೆಗಳ ಹಕ್ಕು ಬದಲಾವಣೆಯಾದ ವಿಷಯಗಳನ್ನು ವಾದ ಪತ್ರದಲ್ಲಿ ಬರೆಯಿಸಿಲ್ಲ ಎಂದರೆ ಸರಿ. ಸರ್ವೆ ನಂ 145 ರಲ್ಲಿ ಕುಬೇರಪ್ಪ ಮತ್ತು ಉಮೇಶಪ್ಪರವರು ತಮಗೆ ಇದ್ದ ಭಾಗದ ಹಕ್ಕನ್ನು 4 ನೇ ವಾದಿ, ನನಗೆ ಮತ್ತು 7ನೇ ಪ್ರತಿವಾದಿಗೆ ಬಿಟ್ಟು ಕೊಟ್ಟ ಬಗ್ಗೆ ವಾದ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿ. 2 ನೇ ವಾದಿ ಕಳೆದ 30 ವರ್ಷಗಳಿಂದ ಭದ್ರಾವತಿ ತಾಲ್ಲೂಕಿನ ಅತ್ತಿಗುಂದ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ. 3 ನೇ ವಾದಿ ದುರ್ವಿಗೆರೆ ಗ್ರಾಮದಲ್ಲಿ ತನ್ನ ತವರುಮನೆಯವರು ನೀಡಿದ ಆಸ್ತಿಯಲ್ಲಿ ಜೀವನ ಮಾಡುತ್ತಿದ್ದಾರೆ ಎಂದರೆ ಸರಿ. 1969 ಕ್ಕೂ ಮುಂಚೆ ಗಂಗಾಧರಪ್ಪ ಮತ್ತು ನಿಂಗಪ್ಪರವರು ಕುಟುಂಬದ ಆಸ್ತಿಗಳನ್ನು ಮೌಖಿಕವಾಗಿ ವಿಭಾಗ ಮಾಡಿಕೊಂಡಿದ್ದ ಕಾರಣ ಪ್ರಸ್ತುತ ವಿಭಾಗ ಮಾಡಿಕೊಳ್ಳತಕ್ಕ ಯಾವುದೇ ಆಸ್ತಿ ಉಳಿದಿಲ್ಲ ಎಂದರೆ ಸರಿಯಲ್ಲ. ಮೌಖಿಕ ವಿಭಾಗದ ವಿಷಯ ಮುಚ್ಚಿಟ್ಟು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.